ಶ್ರೀ ಕೆ. ವಸಂತ ಬಂಗೇರ.—ಯಾವಾಗಿನಿಂದ ಪ್ರಾರಂಭಿಸುತ್ತೀರಿ ಮತ್ತು ಯಾವ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು. ಏಕೆಂದರೆ ನನ್ನ ತಾಲ್ಲೂಕಿನಲ್ಲೇ ಸುಮಾರು ೭ ಕಡೆ ಸಣ್ಣ ಜಲಪಾತಗಳಿದ್ದು ಅವುಗಳಿಂದ ಜಲವಿದ್ಯುತ್ ತಯಾರಿಸಬಹುದೆಂಬುದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಈ ಯೋಜನೆಗಳ ಬಗ್ಗೆ ಒಂದು ಬಗೆಯ ಅಸ್ಪಷ್ಟತೆ ಕಾಣುತ್ತಿದೆ. ಹೇಗೆಂದರೆ ನನ್ನ ತಾಲ್ಲೂಕಿನಲ್ಲೇ ನೆರಿಯ ಯೋಜನೆ ಎಂಬುದನ್ನು ಕೈಗೆತ್ತಿಕೊಂಡು ಅನೇಕ ವರ್ಷಗಳಿಂದ ಸರ್ವೆ ಕೆಲಸ ನಡೆಯುತ್ತಿದೆ. ಅದನ್ನು ಮಾಡುತ್ತಿರುವವರು ರಾಜ್ಯವೋ ಕೇಂದ್ರವೋ ಗೊತ್ತಿಲ್ಲ. ಹಿಂದೆ ವಿಧಾನಸಭೆಯಲ್ಲಿ ಈ ಬಗ್ಗೆ ಪ್ರಶ್ನೆ ಹಾಕಿದಾಗ ಅದಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ಕೊಟ್ಟಿಲ್ಲವೆಂದು ತಿಳಿಯಿತು. ಆದರೂ ಕೆಲಸ ನಡೆಯುತ್ತಿದೆ. ಅಲ್ಲಿ ಮರ ಕಡಿಯುವ ಕೆಲಸ ಆರಂಭಗೊಂಡಿದ್ದರಿಂದ ಮಂಗನ ಕಾಯಿಲೆ ಪ್ರಾರಂಭವಾಯಿತು. ಇದು ಅಥಾರಿಟೀಸ್‌ಗೆ ಏಕೆ ಬೇಕಾಗಿದೆ ಎಂದರೆ ಆ ಯೋಜನೆಯಿಂದ ವಿದ್ಯುತ್‌ನ್ನು ಉತ್ಪಾದಿಸುತ್ತಾರಂತೆ. ಜೊತೆಗೆ ಮಂಗಳೂರಿನ ಜನರಿಗೆ ನೀರು ಒದಗಿಸುತ್ತಾರಂತೆ. ಅಂದರೆ ಸುಮಾರು ೧೦ ಗ್ರಾಮಗಳನ್ನು ಮುಳುಗಿಸಿ ಒಂದು ಪಟ್ಟಣಕ್ಕೆ ನೀರು ಕುಡಿಸುವ ಯೋಜನೆ ಇದು. ಈ ೧೦ ಗ್ರಾಮಗಳ ವ್ಯಾಪ್ತಿಯಲ್ಲಿ ಸಾವಿರಾರು ಎಕರೆ ಕಾಡು ಬಂದು ಅದು ಕಡಿಯಲ್ಪಡುವುದರಿಂದ ಮತ್ತೆ ಮಂಗನ ಕಾಯಿಲೆ ನನ್ನ ಕ್ಷೇತ್ರದಲ್ಲಿ ಕಾಣಬಹುದೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಆ ಯೋಜನೆಯನ್ನು ಕೈಬಿಟ್ಟು ಕಾಡು ಕಡಿಯುವುದನ್ನು ನಿಲ್ಲಿಸಬೇಕೆಂದು ಕೇಳುತ್ತ, ನಾನು ನನ್ನ ಕ್ಷೇತ್ರದಲ್ಲಿ ಬರುವುದೆಂದು ಹೇಳಿರುವ ೭ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಈಗಾಗಲೇ ಸರ್ವೆಯಾಗಿರುವ ಪ್ರಕಾರ ಸುಮಾರು ೨೩೦ ಕಡೆ ಮಿನಿ ಹೈಡೆಲ್ ಪ್ರಾಜೆಕ್ಟ್‌ಸ ಮಾಡಬಹುದಾಗಿದೆ. ಅವುಗಳಲ್ಲಿ ಸದಸ್ಯರು ಹೇಳಿದ ೭ ಜಲಪಾತಗಳೂ ಸೇರಿರಬಹುದು. ಸರ್ಕಾರವಂತೂ ವಿದ್ಯುತ್ ಉತ್ಪಾದಿಸುವ ಯಾವ ಅವಕಾಶವನ್ನೂ ಕಳೆದು ಕೊಳ್ಳುವುದಿಲ್ಲ. ಈವನ್ ಖಾಸಗಿಯವರಿಗೂ ಮಾಡಿ ಎಂದು ಹೇಳಿದ್ದೇನೆ. ಇನ್ನು ಮಾನ್ಯ ಸದಸ್ಯರು ಹೇಳಿದ ನೆರಿಯಾ ಯೋಜನೆಗೆ ನನ್ನ ಗಮನಕ್ಕೆ ಬಂದಿಲ್ಲ. ಇವರ ಊರುಗಳನ್ನು ಮುಳುಗಿಸಿ ಪಟ್ಟಣಕ್ಕೆ ನೀರು ಕೊಡುವುದು ಸರ್ಕಾರದ ನೀತಿಯಲ್ಲ. ಈ ವಿಷಯ ಈಗ ನನ್ನ ಗಮನಕ್ಕೆ ಬಂದಿದೆ. ಅದನ್ನು ಪರಿಶೀಲಿಸುತ್ತೇನೆ.

## ಮೈಸೂರು ಗಂಧದೆಣ್ಣೆ ಕಾರ್ಖಾನೆಯ ಎಣ್ಣೆ ಉತ್ಪಾದನೆ ಬಗ್ಗೆ

೪೧೯೦ ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಭಾರಿ ಮತ್ತು ವಂಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದಲ್ಲಿನ ವಿಶ್ವವಿಖ್ಯಾತ ಗಂಧದೆಣ್ಣೆ ಕಾರ್ಖಾನೆಯಲ್ಲಿ ಎಣ್ಣೆಯನ್ನು ಮತ್ತೆ ಉತ್ಪಾದಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಆ) ಕಾರ್ಖಾನೆಗೆ ಗಂಧದೆಣ್ಣೆ ಉತ್ಪಾದಿಸಲು ಗಂಧದ ಮರ ಸರಬರಾಜು ಮಾಡಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೆ ?

ಇ) ಕಾರ್ಖಾನೆಯಲ್ಲಿ ಉತ್ಪಾದನೆ ಇಲ್ಲದೆ ಇರುವಾಗ ಅಲ್ಲಿಯ ನೌಕರರಿಗೆ ಪರ್ಯಾಯ ಯಾವ ಉದ್ಯೋಗವನ್ನು ಒದಗಿಸಿದ್ದೀರಿ, ಮತ್ತು ಈಗ ಯಾವ ವಸ್ತುಗಳನ್ನು ಉತ್ಪಾದಿಸಲಾಗುತ್ತಿದೆ ?

ಶ್ರೀ ಜೆ. ಎಚ್. ಪಟೇಲ್ (ಭಾರಿ ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—

ಅ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) — ಸದು —

ಇ) ಈ ಕೆಳಗಿನ ವಸ್ತುಗಳನ್ನು ತಯಾರಿಸುತ್ತಿದ್ದು, ಆ ವಸ್ತುಗಳ ತಯಾರಿಕೆ ಕೆಲಸ ನಿರ್ವಹಣೆಗಾಗಿ ಹಾಗೂ ಯಂತ್ರೋಪಕರಣಗಳ ಉಸ್ತುವಾರಿಗಾಗಿ ಮೈಸೂರು ಗಂಧದ ಎಣ್ಣೆ ಕಾರ್ಖಾನೆ ನೌಕರರನ್ನು ತೊಡಗಿಸಲಾಗಿದೆ.

೧) ಊದುಬತ್ತಿ ೨) ಮೈಸೂರು ಗಂಧದ ಸಾಬೂನು (ಸ್ನಾನದ ಸಾಬೂನು)

೩) ಮೈಸೂರು ಮಲ್ಲಿಗೆ (ಸ್ನಾನದ ಸಾಬೂನು) ಸಾಬೂನು.

**ಶ್ರೀ ವೇದಾಂತ ಹೆಬ್ಬಿಗೆ.**—ಈಗ ಸರ್ಕಾರದ ವಶದಲ್ಲಿ ಸುಮಾರು ೧೨ ಕೋಟಿ ಬೆಲೆ ಬಾಳುವ ಗಂಧದ ಮರ ಸ್ಟಾಕ್ ಇದೆ. ಇದನ್ನು ಸುಮಾರು ಆರೇಳು ತಿಂಗಳಿಗಿಂತಲೂ ಜಾಸ್ತಿ ಅವಧಿಯಲ್ಲಿ ಇಟ್ಟಿದ್ದಾರೆ. ಇಷ್ಟೊಂದು ಅವಧಿಯಾದ ಮೇಲೆ ಗಂಧದ ಮರದಿಂದ ಗಂಧದೆಣ್ಣೆ ಕಡಿಮೆಯಾಗುತ್ತೆ ಹೋಗುತ್ತದೆ. ಈಗಾಗಲೇ ಅವಧಿ ತೀರಿದೆ. ಗಂಧದೆಣ್ಣೆ ತಯಾರು ಮಾಡುವ ಫ್ಯಾಕ್ಟರಿಗಳು ಗಂಧದ ಮರದ ಅಭಾವದಿಂದ ಎಣ್ಣೆ ತೆಗೆಯುವುದನ್ನು ನಿಲ್ಲಿಸಿದ್ದು ಸದರಿ ಫ್ಯಾಕ್ಟರಿಗಳಿಗೆ ಮರ ಒದಗಿಸಲು ಏನು ವ್ಯವಸ್ಥೆ ಮಾಡಿದ್ದೀರಿ ? ಎರಡನೆಯದಾಗಿ ಪರದೇಶಗಳಿಂದ ಗಂಧದೆಣ್ಣೆಗಾಗಿ ಎಷ್ಟು ಟನ್ ಬೇಡಿಕೆ ಬಂದಿದೆ, ವಿವರ ಕೊಡಿ.

**ಶ್ರೀ ಜೆ ಹೆಚ್. ಪಟೇಲ್.**—ಅಧ್ಯಕ್ಷರೇ, ಈ ಪ್ರಶ್ನೆಗೆ ಉತ್ತರ ಒದಗಿಸಲು ಸ್ವಲ್ಪ ಕಾಲಾವಕಾಶ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ವೇದಾಂತ ಹೆಬ್ಬಿಗೆ.**—ಸ್ವಾಮಿ, ನನ್ನ ಪ್ರಶ್ನೆಗೆ ಉಪ-ಪ್ರಶ್ನೆ ಕೇಳಲು ನನಗೆ ಅವಕಾಶ ಕೊಡಲಿಲ್ಲ.

**ಶ್ರೀಮತಿ ಕೆ. ಎಸ್. ನಾಗರತ್ನಮ್ಮ.**—ಇಷ್ಟು ಹೊತ್ತು ಏನು ಮಾಡುತ್ತಿದ್ದಿರಿ ? ಈಗಾಗಲೇ ನನ್ನ ಪ್ರಶ್ನೆ ಬಂದಿದೆ.

**ಶ್ರೀ ಎಸ್. ಬಂಗಾರಪ್ಪ**—ಪಟೇಲರು ' ಜಂಟಿ ನಿರ್ದೇಶಕರಂ ' ಎಂಬ ಉತ್ತರ ಕೊಟ್ಟಿದ್ದಾರೆ. ಅದರ ಮೇಲೇ ಕೇಳಲಿ.

**ಶ್ರೀ ಜೆ. ಹೆಚ್. ಪಟೇಲ್.**—ವಿರೋಧ ಪಕ್ಷದ ನಾಯಕಿಯವರ ಪ್ರಶ್ನೆ ಬೇರೆ, ಹೆಬ್ಬಿಗೆಯವರ ಪ್ರಶ್ನೆ ಬೇರೆ.

**ಅಧ್ಯಕ್ಷರು.**—ಅರ್ಧ ಗಂಟೆಗೆ ಚರ್ಚೆಗೆ ನೋಟೀಸ್ ಕಳಿಸಿಕೊಡಿ

**ಶ್ರೀ ಜೆ. ಹೆಚ್. ಪಟೇಲ್.**—ಸಮರ್ಪಕವಾದ ಉತ್ತರವನ್ನು ನಾನು ಅವರಿಗೆ ಕಳಿಸಿಕೊಡುತ್ತೇನೆ

**ಅಧ್ಯಕ್ಷರು.**—ಉತ್ತರ ತಮಗೆ ಸಮರ್ಪಕವಾಗದಿದ್ದರೆ ಅರ್ಧ ಗಂಟೆ ಚರ್ಚೆಗೆ ಹಾಕಿ

## ಕರ್ನಾಟಕ ರಾಜ್ಯ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್

**೫೦೦. ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).**—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಇದರ ಜಂಟಿ ನಿರ್ದೇಶಕರಿಗೆ (ಅಂಕಿಅಂಶ) ನೀಡಲಾಗಿರುವ ಕೆಲಸ ಕಾರ್ಯಗಳೇನು ?

ಆ) ಜಂಟಿ ನಿರ್ದೇಶಕರಿಗೆ (ಅಂಕಿಅಂಶಗಳು) ಇವರಿಗೆ ನಿರ್ದಿಷ್ಟವಾದ ಹಾಗೂ ಸಾಕಷ್ಟು ಕೆಲಸಗಳು ಇಲ್ಲದಿರುವುದರಿಂದ ಈ ಹುದ್ದೆಯನ್ನು ಕೆಳದರ್ಜೆಗೆ ಇಳಿಸಲು ಅಥವಾ ರದ್ದುಪಡಿಸಲು ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕಾರಣವೇನು ?

ಇ) ಈಗಿರುವ ಜಂಟಿ ನಿರ್ದೇಶಕರು (ಅಂಕಿಅಂಶಗಳು) ಇವರ ನಿಯೋಜನೆ ಅವಧಿ ಮುಗಿದಿದ್ದರೂ ಇವರನ್ನು ಏಕೆ ಮುಂದುವರಿಸಲಾಗಿದೆ ?